ಕರ್ನಾಟಕ ಸರ್ಕಾರ
ಸಹಕಾರ ಚುನಾವಣಾ ಪ್ರಾಧಿಕಾರ

ಸಂಖ್ಯೆ: ಸಚುಪ್ರಾ/ಆಡಳಿತ/ಚುನಾವಣೆ/ 96 /2014

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್,
ಶಾಂತಿನಗರ, ಬೆಂಗಳೂರು-560027
ದಿನಾಂಕ: 05.03.2015.

## -: ಅಧಿಸೂಚನೆ :-

**ವಿಷಯ:-** 2015ನೇ ಸಾಲಿನಲ್ಲಿ ಪದಾವಧಿ ಮುಗಿಯಲಿರುವ ಮಾಧ್ಯಮಿಕ / ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗಳಿಗೆ ಚುನಾವಣೆ ನಡೆಸಲು ಅಧಿಸೂಚನೆ ಹೊರಡಿಸುವ ಬಗ್ಗೆ.

**ಉಲ್ಲೇಖ:-**
1. ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ: ಸಚುಅ/ಚುನಾವಣೆ/84/2014 ದಿನಾಂಕ:06-11-2014.
2. ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ಸಂಖ್ಯೆ: ಸಚುಪ್ರಾ/ ಚುನಾವಣೆ/ಆಡಳಿತ/ಮಾ.ಸ/102/2014 ದಿನಾಂಕ:12/12/2014.
3. ಕರ್ನಾಟಕ ರಾಜ್ಯ ಪತ್ರ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ : ಸಂವ್ಯಶಾಇ/58/ಶಾಸನ/ 2014, ಬೆಂಗಳೂರು ದಿನಾಂಕ : 06-09-2014.
4. ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ಸಂಖ್ಯೆ : ಸಚುಪ್ರಾ/ಜಿಚುಅ/ಫೆಡರಲ್/103/2014-15 ದಿನಾಂಕ : 05.03.2015.
5. ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ಸಂಖ್ಯೆ : ಸಚುಪ್ರಾ/ಜಿಚುಅ/ಅಪೆಕ್ಸ್/104/2014-15 ದಿನಾಂಕ : 05.03.2015.

★★★★★

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 39ಎ ಯ ಅವಕಾಶದಂತೆ, ಮೊದಲ ಹಂತದಲ್ಲಿ 2015 ನೇ ಸಾಲಿಗೆ ಉಲ್ಲೇಖ (1) ರಲ್ಲಿ ಎಲ್ಲಾ ಹಂತದ 2015 ರ ಜನವರಿ, ಫೆಬ್ರವರಿ ಮತ್ತು ಮಾರ್ಚ್‌ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಗಳಿಗೆ / ಪದಾಧಿಕಾರಿಗಳಿಗೆ ಚುನಾವಣೆಗಳನ್ನು ನಡೆಸಲು ಅಧಿಸೂಚನೆಯನ್ನು ಹೊರಡಿಸಿ ರಿಟರ್ನಿಂಗ್ ಆಫೀಸರ್‌ಗಳ ನೇಮಕಾತಿ ಮಾಡಲಾಗಿದೆ. ಉಲ್ಲೇಖ (2)ರಲ್ಲಿ ಎರಡನೇ ಹಂತದ ಮಾಧ್ಯಮಿಕ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಳಿಗಳ/ಪದಾಧಿಕಾರಿಗಳ ಚುನಾವಣೆಯನ್ನು ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಿ ಆದೇಶಿಸಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2012ರ ಮತ್ತು 2014ರ ತಿದ್ದುಪಡಿಯಂತೆ ಪ್ರಕರಣ-39ಎ ಹಾಗೂ 39ಎಎ ರೀತ್ಯಾ ತತ್ಪರಿಣಾಮ ರಾಜ್ಯದ ಎಲ್ಲಾ ರೀತಿಯ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಯ ಸದಸ್ಯರ ಸಾಮಾನ್ಯ/ಪದಾಧಿಕಾರಿಗಳ ಚುನಾವಣೆಯನ್ನು ಮತ್ತು ಆಕಸ್ಮಿಕ ಖಾಲಿ ಸ್ಥಾನಗಳನ್ನು ಸಹಕಾರ ಚುನಾವಣಾ ಪ್ರಾಧಿಕಾರದ ಅಧೀಕ್ಷಣೆಗೆ ಒಳಪಟ್ಟು ನಡೆಸತಕ್ಕದ್ದಾಗಿದೆ. ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ನಡೆಸುವ ಎಲ್ಲಾ ಚುನಾವಣೆಗಳನ್ನು ನಡೆಸುವಿಕೆಗೆ ಸಂಬಂಧಿಸಿದಂತೆ ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವ ಕಾರ್ಯವು ಸಹಕಾರ ಚುನಾವಣಾ ಪ್ರಾಧಿಕಾರದ್ದಾಗಿರುತ್ತದೆ.

ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ-39ಎ(2)(ಬಿ) ರೀತ್ಯಾ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ-26 ಮತ್ತು 26ಎ ರೀತ್ಯಾ ಹಾಗೂ ಸರ್ಕಾರದ ಇತ್ತೀಚಿನ ತಿದ್ದುಪಡಿಯಂತೆ ಸಹಕಾರ ಸಂಘಗಳ / ಸಹಕಾರಿಗಳ ಮಂಡಲಿಗಳ ಸದಸ್ಯರ/ಪದಾಧಿಕಾರಿಗಳ ಸಾಮಾನ್ಯ ಚುನಾವಣೆಗಳನ್ನು 4 ಹಂತಗಳಲ್ಲಿ ನಡೆಸತಕ್ಕದ್ದಾಗಿದೆ.

- ಅಧಿನಿಯಮ ಪ್ರಕರಣ–39ಎ(2)(ಎ) ರೀತ್ಯಾ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿದೆ.
- ಅಧಿನಿಯಮ ಪ್ರಕರಣ–39ಎ(2)(ಬಿ) ರೀತ್ಯಾ ಎರಡನೇ ಹಂತದಲ್ಲಿ ಮಾಧ್ಯಮಿಕ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿದೆ.
- ಅಧಿನಿಯಮ ಪ್ರಕರಣ–39ಎ(2)(ಸಿ) ರೀತ್ಯಾ ಮೂರನೇ ಹಂತದಲ್ಲಿ ಫೆಡರಲ್ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿದೆ.
- ಅಧಿನಿಯಮ–39ಎ(2)(ಡಿ) ರೀತ್ಯಾ ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿದೆ.

ಪ್ರಾಧಿಕಾರವು ಪ್ರಾಥಮಿಕ ಹಂತದ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಗಳಿಗೆ ಚುನಾವಣೆ ನಡೆಸಲು ಈ ಹಿಂದೆ ಇದ್ದಂತೆ ಜಿಲ್ಲಾ ಉಪನಿಬಂಧಕರುಗಳನ್ನೇ ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ ನೇಮಕಾತಿ ಮಾಡಿ ಮುಂದುವರೆಸಲಾಗಿದೆ. ದಿನಾಂಕ: 31–03–2015 ರವರೆಗೆ ಆಡಳಿತ ಮಂಡಲಿ ಪದಾವಧಿ ಮುಗಿಯಲಿರುವ ಪ್ರಾಥಮಿಕ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗೆ ಚುನಾವಣೆಗಳನ್ನು ನಡೆಸುವ ಸಂಬಂಧ ಚುನಾವಣಾ ದಿನಾಂಕಗಳನ್ನು ನಿಗಧಿಪಡಿಸಿ, ದಿನಾಂಕ : 06.11.2014 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅದೇ ರೀತಿಯಲ್ಲಿ ದಿನಾಂಕ : 01.04.2015 ರಿಂದ 31.12.2015ರವರೆಗೆ ಪದಾವಧಿ ಮುಗಿಯಲಿರುವ ಆಡಳಿತ ಮಂಡಲಿಗಳಿಗೆ ಚುನಾವಣೆಯನ್ನು ನಡೆಸಲು ದಿನಾಂಕ : 23.02.2015 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಪ್ರಾಥಮಿಕ ಹಂತದ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆ ಪ್ರಕ್ರಿಯೆ ಮುಗಿದ ನಂತರ ಎರಡನೇ ಹಂತದಲ್ಲಿ ಮಾಧ್ಯಮಿಕ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಯನ್ನು, ಮೂರನೇ ಹಂತದಲ್ಲಿ ಫೆಡರಲ್ ಹಾಗೂ ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಯನ್ನು ನಡೆಸತಕ್ಕದ್ದಾಗಿದೆ. ಪ್ರತಿ ಹಂತದ ಚುನಾವಣೆಗಳನ್ನು ನಿಯಮಾನುಸಾರ ನಡೆಸತಕ್ಕದ್ದಾಗಿದೆ. ಪ್ರಾಥಮಿಕ ಹಂತದ ಚುನಾವಣೆಯ ನಂತರ ಮಾಧ್ಯಮಿಕ ಮತ್ತು ಫೆಡರಲ್ ಸಂಘಗಳಿಗೆ ಪ್ರತಿನಿಧಿಗಳನ್ನು ಕಳುಹಿಸಬೇಕಾಗಿರುತ್ತದೆ. ಪ್ರತಿನಿಧಿಗಳನ್ನು ಕಳುಹಿಸಲು ಮತ್ತು ಚುನಾವಣೆಯನ್ನು ನಿಯಮಾನುಸಾರ ನಡೆಸಲು ನಿಗದಿತ ಕಾಲಾವಕಾಶವು ಬೇಕಾಗಿರುತ್ತದೆ. ಅದರಂತೆ ದಿನಾಂಕಗಳನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದಾಗಿದೆ.

ಎರಡನೇ ಹಂತದಲ್ಲಿ ಮಾಧ್ಯಮಿಕ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 2(ಐ-1)ರ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸಲು ಅವಕಾಶವಿದ್ದು, ಮಾಧ್ಯಮಿಕ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಉಲ್ಲೇಖ(2)ರಲ್ಲಿ ಕಾಣಿಸಿರುವ ಆದೇಶದಲ್ಲಿ ರಾಜ್ಯದ ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರನ್ನು ಮಾಧ್ಯಮಿಕ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆ ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ ನೇಮಕಾತಿ ಮಾಡಿ ಆದೇಶಿಸಲಾಗಿದೆ. ಜಿಲ್ಲಾ ಚುನಾವಣಾಧಿಕಾರಿಗಳು ಅವರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಲು ಸಹಾಯಕ ಜಿಲ್ಲಾ ಚುನಾವಣಾಧಿಕಾರಿಗಳ ನೇಮಕಾತಿಯ ಅವಶ್ಯಕತೆ ಇದ್ದಲ್ಲಿ ತಮಗೆ ಸೂಕ್ತವೆನಿಸಿದ ಅಧಿಕಾರಿಯ ಹೆಸರು ಮತ್ತು ಪದನಾಮವನ್ನು ತಿಳಿಸಿ ಪ್ರಾಧಿಕಾರದಿಂದ ನೇಮಕಾತಿ ಆದೇಶ ಪಡೆಯಬಹುದಾಗಿರುತ್ತದೆ.

ಮೂರನೇ ಹಂತದಲ್ಲಿ ಫೆಡರಲ್ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 2(ಐ-1)ರ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸಲು ಅವಕಾಶವಿದ್ದು, ಫೆಡರಲ್ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಉಲ್ಲೇಖ(4)ರಲ್ಲಿ ಕಾಣಿಸಿರುವ ಆದೇಶದಲ್ಲಿ **ರಾಜ್ಯದ ಎಲ್ಲಾ ಜಿಲ್ಲಾ ಜಿಲ್ಲಾಧಿಕಾರಿಗಳನ್ನು ಫೆಡರಲ್ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆ ನಡೆಸಲು ಜಿಲ್ಲಾ**

**ಚುನಾವಣಾಧಿಕಾರಿಗಳನ್ನಾಗಿ ನೇಮಕಾತಿ ಮಾಡಿ ಆದೇಶಿಸಲಾಗಿದೆ.** ಜಿಲ್ಲಾ ಚುನಾವಣಾಧಿಕಾರಿಗಳು ಅವರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಲು ಸಹಾಯಕ ಜಿಲ್ಲಾ ಚುನಾವಣಾಧಿಕಾರಿಗಳ ನೇಮಕಾತಿಯ ಅವಶ್ಯಕತೆ ಇದ್ದಲ್ಲಿ ತಮಗೆ ಸೂಕ್ತವೆನಿಸಿದ ಅಧಿಕಾರಿಯ ಹೆಸರು ಮತ್ತು ಪದನಾಮವನ್ನು ತಿಳಿಸಿ ಪ್ರಾಧಿಕಾರದಿಂದ ನೇಮಕಾತಿ ಆದೇಶ ಪಡೆಯಬಹುದಾಗಿರುತ್ತದೆ.

ಹಾಗೆಯೇ, ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 2(ಐ-1)ರ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸಲು ಅವಕಾಶವಿದ್ದು ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಉಲ್ಲೇಖ(5)ರಲ್ಲಿ ಕಾಣಿಸಿರುವ ಆದೇಶದಲ್ಲಿ **ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರುಗಳನ್ನು (Regional Commissioners) ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆ ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ ನೇಮಕಾತಿ ಮಾಡಿ ಆದೇಶಿಸಲಾಗಿದೆ.** ಜಿಲ್ಲಾ ಚುನಾವಣಾಧಿಕಾರಿಗಳು ಅವರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಲು ಸಹಾಯಕ ಜಿಲ್ಲಾ ಚುನಾವಣಾಧಿಕಾರಿಗಳ ನೇಮಕಾತಿಯ ಅವಶ್ಯಕತೆ ಇದ್ದಲ್ಲಿ ತಮಗೆ ಸೂಕ್ತವೆನಿಸಿದ ಅಧಿಕಾರಿಯ ಹೆಸರು ಮತ್ತು ಪದನಾಮವನ್ನು ತಿಳಿಸಿ ಪ್ರಾಧಿಕಾರದಿಂದ ನೇಮಕಾತಿ ಆದೇಶ ಪಡೆಯಬಹುದಾಗಿರುತ್ತದೆ.

ಮೇಲೆ ವಿವರಿಸಿರುವ ಹಿನ್ನಲೆಯಲ್ಲಿ ಮಾಧ್ಯಮಿಕ, ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆ ದಿನಾಂಕಗಳನ್ನು ಗೊತ್ತುಪಡಿಸಿ ಅಧಿಸೂಚನೆ ಹೊರಡಿಸಿ ಸದರಿ ಅವಧಿಯಲ್ಲಿ ಆಡಳಿತ ಮಂಡಲಿಗಳ ಚುನಾವಣೆಯನ್ನು ನಡೆಸಲು ಆದೇಶಿಸಿದೆ. **ಈ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧ-1 (ಜಿಲ್ಲಾ ಚುನಾವಣಾಧಿಕಾರಿಗಳು ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗೆ / ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ಕಾನೂನಿಗೆ ಅನುಗುಣವಾಗಿ ನಡೆಸುವ ಬಗ್ಗೆ ಅನುಸರಿಸಬೇಕಾದ ಮಾರ್ಗಸೂಚಿಗಳು) ಮತ್ತು ಅನುಬಂಧ-2 (ಚೆಕ್‌ಲಿಸ್ಟ್) ಗಳಂತೆ ಜಿಲ್ಲಾ ಚುನಾವಣಾಧಿಕಾರಿಗಳು ಚುನಾವಣೆ ನಡೆಸಲು ಕ್ರಮವಿಡತಕ್ಕದ್ದು.**

| ಕ್ರಮ ಸಂಖ್ಯೆ | ಸಹಕಾರ ಸಂಘಗಳ ವರ್ಗ | ಚುನಾವಣೆ ನಡೆಸಲು ಗೊತ್ತುಪಡಿಸಿದ ದಿನಾಂಕ / ಅವಧಿ |
|---|---|---|
| 01 | **ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ-39ಎ(2)(ಬಿ) ರೀತ್ಯಾ ಹಾಗೂ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ-26ಎ ರೀತ್ಯಾ ಎರಡನೇ ಹಂತದಲ್ಲಿ ಬಿಡಿ ವ್ಯಕ್ತಿಗಳ ಸದಸ್ಯತ್ವ ಮತ್ತು ಬೇರೊಂದು ಸಹಕಾರ ಸಂಘಗಳ ಸದಸ್ಯತ್ವ ಪಡೆಯಲು ಅವಕಾಶವಿರುವ ಮಾಧ್ಯಮಿಕ ಸಂಘಗಳ ಚುನಾವಣೆಯನ್ನು ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು.** | **ದಿನಾಂಕ : 09-05-2015 ಮತ್ತು 10-05-2015ರ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ.** |
| 02 | **ಸಹಕಾರ ಸಂಘಗಳ ಅಧಿನಿಯಮ 1959 ಅಧಿನಿಯಮ ಪ್ರಕರಣ-39ಎ(2)(ಸಿ) ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ-26(ಎ) ರೀತ್ಯಾ 3ನೇ ಹಂತದ ಫೆಡರಲ್ ಸಂಘಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು.** | |
| | (ಎ) ಪ್ರಾಥಮಿಕ ಸಹಕಾರ ಸಂಘಗಳು /ಸಹಕಾರಿಗಳು ಮಾತ್ರ ಸದಸ್ಯತ್ವ ಪಡೆಯಲು ಅವಕಾಶವಿರುವ ಫೆಡರಲ್ ಸಂಘಗಳು / ಒಕ್ಕೂಟ ಸಹಕಾರಿಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು. | ದಿನಾಂಕ : 12.05.2015 ಮತ್ತು 13.05.2015ರ ಅವಧಿಯಲ್ಲಿ ಜಿಲ್ಲಾಚುನಾವಣಾಧಿಕಾರಿಗೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |
| | (ಬಿ) ಎಲ್ಲಾ ವರ್ಗದ ಸಹಕಾರ ಸಂಘಗಳು /ಸಹಕಾರಿಗಳ ಸದಸ್ಯತ್ವ ಹೊಂದಿರುವ ಫೆಡರಲ್ ಸಂಘಗಳು /ಒಕ್ಕೂಟ ಸಹಕಾರಿಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು. | ದಿನಾಂಕ : 30.05.2015 ಮತ್ತು 31.05.2015ರ ಅವಧಿಯಲ್ಲಿ ಜಿಲ್ಲಾಚುನಾವಣಾಧಿಕಾರಿಗೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |

| | | |
|---|---|---|
| 03 | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ-39ಎ(2)(ಡಿ), ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ-26ಎ ರೀತ್ಯಾ ನಾಲ್ಕನೇ ಹಂತದ ಅಪೆಕ್ಸ್ ಸಂಘಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು. | |
| | (ಎ) ರಾಜ್ಯಾದ್ಯಂತ ಕಾರ್ಯವ್ಯಾಪ್ತಿ ಹೊಂದಿರುವ ಪ್ರಾಥಮಿಕ ಸಂಘಗಳ /ಸಹಕಾರಿಗಳ ಸದಸ್ಯತ್ವ ಹೊಂದಿರುವ ಫೆಡರಲ್ (ಅಪೆಕ್ಸ್) ಸಂಘಗಳ/ ಒಕ್ಕೂಟ ಸಹಕಾರಿಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು. | ದಿನಾಂಕ : 02.06.2015 ಮತ್ತು 03.06.2015ರ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸಿದ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |
| | (ಬಿ)ರಾಜ್ಯಾದ್ಯಂತ ಕಾರ್ಯವ್ಯಾಪ್ತಿ ಹೊಂದಿರುವ – ಅಪೆಕ್ಸ್ ಸಂಘಗಳ / ಸಹಕಾರಿಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು. | ದಿನಾಂಕ : 20.06.2015 ಮತ್ತು 21.06.2015ರ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸಿದ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |
| | (ಸಿ) ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು. | ದಿನಾಂಕ : 07.11.2015 ಅಥವಾ 08.11.2015ರ ದಿನಾಂಕಗಳಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸಿದ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |

(ಎನ್.ಸಿ.ಮುನಿಯಪ್ಪ)
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

<u>ಪ್ರತಿಯನ್ನು ಈ ಕೆಳಕಂಡವರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ :-</u>

01. ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಅಂತಸ್ತುಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು.
02. ಸಹಕಾರ ಸಂಘಗಳ ನಿಬಂಧಕರು, ನಂ.1,ಆಲಿಆಸ್ಕರ್ ರಸ್ತೆ, ಕರ್ನಾಟಕ ರಾಜ್ಯ, ಬೆಂಗಳೂರು.
03. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಸಹಕಾರ ಸಂಘಗಳ ಅಪರನಿಬಂಧಕರಿಗೆ.
04. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಸಹಕಾರ ಸಂಘಗಳ ಜಂಟಿನಿಬಂಧಕರಿಗೆ.
05. ಸಹಕಾರ ಸಂಘಗಳ ಜಂಟಿನಿಬಂಧಕರು..............................ಪ್ರಾಂತ,.......................................ಜಿಲ್ಲೆ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು (**ಮಾಧ್ಯಮಿಕ ಸಹಕಾರ ಸಂಘಗಳು**).
06. ಜಿಲ್ಲಾಧಿಕಾರಿಗಳು, ....................................................ಜಿಲ್ಲೆ ಹಾಗೂ ಜಿಲ್ಲಾಚುನಾವಣಾಧಿಕಾರಿಗಳು (**ಫೆಡರಲ್ ಸಹಕಾರ ಸಂಘಗಳು**).
07. ಪ್ರಾದೇಶಿಕ ಆಯುಕ್ತರು (**Regional Commissioners**) ( .................................................. ಹಾಗೂ ಜಿಲ್ಲಾಚುನಾವಣಾಧಿಕಾರಿಗಳು (**ಅಪೆಕ್ಸ್ ಸಹಕಾರ ಸಂಘಗಳು**).
08. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರುಗಳಿಗೆ.
09. ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ.
10. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು.

<u>**ಈ ಕೆಳಕಂಡ ಮಹಾ ಮಂಡಳಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ :**</u>

11. ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು.
12. ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು.
13. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಡಿ.ದೇವರಾಜಅರಸ್ ರಸ್ತೆ, ಬೆಂಗಳೂರು.
14. ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಕೆ.ಹೆಚ್. ರಸ್ತೆ, ಬೆಂಗಳೂರು.
15. ಕರ್ನಾಟಕ ರಾಜ್ಯ ಸಹಕಾರ ಸಕ್ಕರೆ ಕಾರ್ಖಾನೆಗಳ ಮಹಾಮಂಡಳ ನಿಯಮಿತ, ಮಲ್ಲೇಶ್ವರಂ, ಬೆಂಗಳೂರು.
16. ಕರ್ನಾಟಕ ರಾಜ್ಯ ಸಹಕಾರ ಕೈಗಾರಿಕಾ ಮಹಾಮಂಡಳ ನಿಯಮಿತ, ಕೆ.ಹೆಚ್.ರಸ್ತೆ, ಬೆಂಗಳೂರು.
17. ಕರ್ನಾಟಕ ರಾಜ್ಯ ತೋಟಗಾರಿಕಾ ಮಹಾಮಂಡಳ ನಿಯಮಿತ, ಬಿನ್ನಿಮಿಲ್ ರಸ್ತೆ, ಬೆಂಗಳೂರು.
18. ಕರ್ನಾಟಕ ರಾಜ್ಯ ಸಹಕಾರ ಮಹಿಳಾ ಮಹಾ ಮಂಡಳ ನಿಯಮಿತ, ಡಿ.ದೇವರಾಜಅರಸ್‌ರಸ್ತೆ, ಬೆಂಗಳೂರು.
19. ಕರ್ನಾಟಕ ರಾಜ್ಯ ಸಹಕಾರ ತೆಂಗಿನ ನಾರಿನ ಮಹಾಮಂಡಳ ನಿಯಮಿತ, ರಾಜಾಜಿನಗರ, ಬೆಂಗಳೂರು.
20. ಕರ್ನಾಟಕ ರಾಜ್ಯ ಸಹಕಾರ ಲ್ಯಾಂಪ್ಸ್ ಮಹಾ ಮಂಡಳ ನಿಯಮಿತ, ಜೋಡಿಚಾಮರಾಜ ರಸ್ತೆ, ಮೈಸೂರು.
21. ಕರ್ನಾಟಕ ರಾಜ್ಯ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತ, ದಂಡುಪ್ರದೇಶ, ಬೆಂಗಳೂರು.
22. ಕರ್ನಾಟಕ ರಾಜ್ಯ ಸಹಕಾರ ರೇಷ್ಮೆ ಮಾರಾಟ ಮಹಾಮಂಡಳ ನಿ., ಅವಿನ್ಯೂರಸ್ತೆ, ಬೆಂಗಳೂರು.
23. ಕರ್ನಾಟಕ ರಾಜ್ಯ ಸಹಕಾರ ಚಲನಚಿತ್ರ ಮತ್ತು ಲಲಿತಕಲಾ ಮಹಾಮಂಡಳಿ ನಿ., ಡಿ.ದೇವರಾಜ್ ಅರಸ್ ರಸ್ತೆ, ಬೆಂಗಳೂರು.
24. ಕರ್ನಾಟಕ ರಾಜ್ಯ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಸಹಕಾರ ಮಹಾಮಂಡಳಿ ನಿ., ಒಕ್ಕಲಿಗರ ಭವನ, ಬೆಂಗಳೂರು.
25. ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರದ ಜಂಟಿನಿಬಂಧಕರು / ಉಪನಿಬಂಧಕರು / ಸಹಾಯಕ ನಿಬಂಧಕರು, ಬೆಂಗಳೂರು ಪ್ರಾಂತ / ಬೆಳಗಾವಿ ಪ್ರಾಂತ / ಕಲಬುರ್ಗಿ ಪ್ರಾಂತ / ಮೈಸೂರು ಪ್ರಾಂತ.
26. ರಕ್ಷಕಡತ / ಕಛೇರಿ ಪ್ರತಿ.

# ಅನುಬಂಧ-1

## ಜಿಲ್ಲಾ ಚುನಾವಣಾಧಿಕಾರಿಗಳು ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗೆ / ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ಕಾನೂನಿಗೆ ಅನುಗುಣವಾಗಿ ನಡೆಸುವ ಬಗ್ಗೆ ಅನುಸರಿಸಬೇಕಾದ ಮಾರ್ಗಸೂಚಿಗಳು.

01. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ-13ಡಿ(2)ರ ಅವಕಾಶದಂತೆ ಸಹಕಾರ ಚುನಾವಣಾ ಪ್ರಾಧಿಕಾರವು ಜಿಲ್ಲಾ ಚುನಾವಣಾಧಿಕಾರಿಗಳಿಂದ ಸಾಮಾನ್ಯ ಚುನಾವಣೆಗಳು ಸನ್ನಿಹಿತವಾಗಿರುವ ಸಹಕಾರ ಸಂಘಗಳ ಪಟ್ಟಿಯನ್ನೊಳಗೊಂಡ ಅಂದರೆ ಜಿಲ್ಲಾ ಚುನಾವಣಾಧಿಕಾರಿಗಳಿಂದ ಅಂತಹ ವರದಿಗಳು ಸ್ವೀಕೃತವಾದ ನಂತರ, ಜಿಲ್ಲೆಯೊಳಗಿನ ಪ್ರತಿ ಸಂಘದ ಹೆಸರು / ಅಂಚೆ ವಿಳಾಸ ಹಾಗೂ ಸಾಮಾನ್ಯ ಚುನಾವಣೆಯ ದಿನಾಂಕ ಮತ್ತು ಸ್ಥಳಗಳನ್ನು ತಿಳಿಸುವ, ಆಡಳಿತ ಮಂಡಲಿಗಳ ಸಾಮಾನ್ಯ ಚುನಾವಣೆಗಳನ್ನು ನಡೆಸುವ ಮತ್ತು ಮತದಾರರ ಪಟ್ಟಿಗಳನ್ನು ತಯಾರಿಸುವ ಸಂಬಂಧದಲ್ಲಿ ವೇಳಾಪಟ್ಟಿಗಳನ್ನು ಪ್ರಕಟಿಸತಕ್ಕದ್ದಾಗಿರುತ್ತದೆ.

02. ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ-21ರ ಉಪಕಲಂ (2)ರ ಖಂಡ (ಎ)ಅಡಿ ಪರಂತುಕದ ಪ್ರಕಾರ ಒಂದು ಸಹಕಾರ ಸಂಘಕ್ಕೆ ಹೊಸ [ಮಂಡಲಿ]ಯು ಆಯ್ಕೆಯಾದಲ್ಲಿ ಹಾಗೆ ಹೊಸದಾಗಿ ಆಯ್ಕೆಯಾದ [ಮಂಡಲಿ]ಯು, ಸಂಘದ ಸದಸ್ಯತ್ವ ಹೊಂದಿರುವ ಯಾವುದೇ ಇತರ ಸಹಕಾರ ಸಂಘಕ್ಕೆ ಡೆಲಿಗೇಟನನ್ನು ಅಥವಾ ನಾಮಿನಿಯನ್ನು ಕಳುಹಿಸತಕ್ಕದ್ದು ಎಂದಿರುತ್ತದೆ. ಇದರ ಪರಿಣಾಮವಾಗಿ ಪ್ರಾಥಮಿಕ ಸಹಕಾರ ಸಂಘದ ಚುನಾವಣೆ ಮುಗಿದು ಅದು ಡೆಲಿಗೇಟನನ್ನು ಕಳುಹಿಸಿದ ನಂತರವೇ ಆ ಸಂಘವು ಸದಸ್ಯತ್ವ ಪಡೆದಿರುವ ಮಾಧ್ಯಮಿಕ ಸಂಘ ಅಥವಾ ಫೆಡರಲ್ ಸಂಘದ ಮತದಾರರ ಕರಡುಪಟ್ಟಿ ನಂತರ ಅಂತಿಮ ಮತದಾರರ ಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸಲು ಸಾಧ್ಯವಾಗುತ್ತದೆ. ಹಾಗೆಯೇ, ಒಂದು ಅಪೆಕ್ಸ್ ಸಹಕಾರ ಸಂಘದ ಮತದಾರರ ಪಟ್ಟಿಯನ್ನು ಅದಕ್ಕೆ ಸಂಯೋಜಿತವಾಗಿರುವ ಫೆಡರಲ್ ಸಹಕಾರ ಸಂಘಗಳ ಚುನಾವಣೆ ಮುಗಿದು ಅವುಗಳು ಡೆಲಿಗೇಟನನ್ನು ಕಳುಹಿಸುವವರೆಗೆ ಅಂತಿಮ ಮತದಾರರ ಪಟ್ಟಿ ತಯಾರಿಸಲು ಬರುವುದಿಲ್ಲ. ಪರಿಣಾಮವಾಗಿ ಪ್ರಾಥಮಿಕ ಸಹಕಾರ ಸಂಘಗಳ ಚುನಾವಣೆ ಮುಗಿದ ನಂತರವೇ ಮಾಧ್ಯಮಿಕ ಅಥವಾ ಫೆಡರಲ್ ಸಹಕಾರ ಸಂಘಗಳ ಚುನಾವಣೆ ನಡೆಸತಕ್ಕದ್ದಾಗಿರುತ್ತದೆ. ಹಾಗೆಯೇ ಫೆಡರಲ್ ಸಹಕಾರ ಸಂಘಗಳ ಚುನಾವಣೆ ಮುಗಿದ ನಂತರ ಅಪೆಕ್ಸ್ ಸಂಘಗಳ ಚುನಾವಣೆ ನಡೆಸತಕ್ಕದ್ದಾಗಿದೆ.

03. ಸಹಕಾರ ಸಂಘಗಳ ಅಧಿನಿಯಮ 1959 ಕಲಂ-28ಬಿ ರೀತ್ಯಾ ಹೊಸದಾಗಿ ಚುನಾಯಿತರಾದ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಪದಧಾರಣ ಮಾಡಲು ಅರ್ಹರಾಗಿರುತ್ತಾರೆ.

04. ಚುನಾವಣೆಗಳನ್ನು ನಡೆಸುವುದಕ್ಕಾಗಿ ಮತ್ತು ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವುದಕ್ಕಾಗಿ ತಗಲುವ ವೆಚ್ಚವನ್ನು ಸಂಬಂಧಿಸಿದ ಸಂಘಗಳೇ / ಸಹಕಾರಿಗಳೇ ಭರಿಸತಕ್ಕದ್ದು.

05. ಪದಾವಧಿಯು ಮುಗಿದ ಸಂಘಗಳು / ಸಹಕಾರಿಗಳು ಕೂಡಲೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಹಾಗೂಜಿಲ್ಲಾಚುನಾವಣಾಧಿಕಾರಿಗಳಿಗೆ ವರದಿ ಸಲ್ಲಿಸತಕ್ಕದ್ದು. ಸಹಕಾರ ಚುನಾವಣಾ ಪ್ರಾಧಿಕಾರವು / ಜಿಲ್ಲಾ ಚುನಾವಣಾಧಿಕಾರಿಗಳು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿ ಹಾಗೂ ಮುಖ್ಯಕಾರ್ಯನಿರ್ವಾಹಕರು ಅವಶ್ಯವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದು.

06. ಜಿಲ್ಲಾ ಚುನಾವಣಾಧಿಕಾರಿಗಳು ರಿಟರ್ನಿಂಗ್ ಅಧಿಕಾರಿಗಳ ನೇಮಕಾತಿ ಆದೇಶ ಪ್ರಾಧಿಕಾರದಿಂದ ಸ್ವೀಕೃತವಾದ ಕೂಡಲೆ ಸಂಬಂಧಪಟ್ಟ ರಿಟರ್ನಿಂಗ್ ಆಫೀಸರ್‌ಗಳನ್ನು ಸಂಪರ್ಕಿಸಿ ಆದೇಶದ ಪ್ರತಿಗಳು ತಲುಪಿರುವ ಬಗ್ಗೆ ಅಗತ್ಯ ಕ್ರಮ ಕೈಗೊಂಡು ಆದೇಶದ ಪ್ರತಿಗಳು ತಲುಪಿರುವ ಬಗ್ಗೆ ಖಚಿತ ಪಡಿಸಿಕೊಳ್ಳತಕ್ಕದ್ದು.

07. ಜಿಲ್ಲಾ ಚುನಾವಣಾಧಿಕಾರಿಯು ನಿಯಮ 14ರ ರೀತ್ಯಾ ಚುನಾವಣೆ ಸಂಬಂಧ ನಮೂನೆ-XI ರಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು.

08. ಆ ನಂತರ ರಿಟರ್ನಿಂಗ್ ಅಧಿಕಾರಿಯು ಉದ್ದೇಶಿತ ಚುನಾವಣೆ ಸಂಬಂಧ ನಮೂನೆ-XII ರಲ್ಲಿ 'ನಿಯಮ-14(3)'ರ ಚುನಾವಣಾ ನೋಟೀಸ್ ನೀಡುವ ಕುರಿತು ಜಿಲ್ಲಾ ಚುನಾವಣಾಧಿಕಾರಿ ನಿಗಾವಹಿಸತಕ್ಕದ್ದು ಮತ್ತು ಖಾತರಿ ಪಡಿಸಿಕೊಳ್ಳತಕ್ಕದ್ದು.

09. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ಸಂಬಂಧಿಸಿದ ಸಂಘಗಳ / ಸಹಕಾರಿಗಳ ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವಿಕೆ ಮತ್ತು ಪರಿಶೀಲನೆ, ಚುನಾವಣಾ ಸಿಬ್ಬಂದಿ, ಮತದಾನಕ್ಕೆ ಸೂಕ್ತ ಸ್ಥಳ ನಿಗದಿಪಡಿಸುವುದು, ಮತಕೇಂದ್ರಗಳ ಪರಿಶೀಲನೆ, ಮತಎಣಿಕೆ ವ್ಯವಸ್ಥೆ, ಚುನಾವಣಾ ಸಾಮಗ್ರಿಗಳ ವ್ಯವಸ್ಥೆ, ಚುನಾವಣಾ ಕೆಲಸ ಕಾರ್ಯಗಳ ಉಸ್ತುವಾರಿ ಕುರಿತಂತೆ ಚುನಾವಣೆಗೆ ಪೂರ್ವದಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಅಗತ್ಯ ಸಹಕಾರ ನೀಡತಕ್ಕದ್ದು.

10. ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ / ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಅಧಿನಿಯಮ / ನಿಯಮಗಳ ಅವಕಾಶದಂತೆ ಕ್ರಮ ಕೈಗೊಳ್ಳುವುದು ಮತ್ತು ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗಳ ಮುಖ್ಯಕಾರ್ಯನಿರ್ವಾಹಕರು, ಜಿಲ್ಲಾ ಚುನಾವಣಾಧಿಕಾರಿಗಳ ನಿರ್ದೇಶನಗಳನ್ವಯ ಹಾಗೂ ನಿಯಮಾನುಸಾರ ಅಗತ್ಯ ಕ್ರಮವಿಡಲು ಆದೇಶಿಸಿದೆ.

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಸಹಕಾರ ಸಂಘಗಳ ಅಧಿನಿಯಮ / ನಿಯಮಗಳ ಅವಕಾಶವನ್ನು ಪ್ರಾಧಿಕಾರವು ಗಣನೆಗೆ ತೆಗೆದುಕೊಂಡು ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳು / ಸಹಕಾರಿಗಳ ಸಾಮಾನ್ಯ ಚುನಾವಣೆಗಳನ್ನು ನಡೆಸಲು ದಿನಾಂಕಗಳನ್ನು ಗೊತ್ತುಪಡಿಸಿ ಅಧಿಸೂಚನೆಯನ್ನು ಹೊರಡಿಸಿದೆ. ಸಂಬಂಧಿಸಿದ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆ ನಡೆಸುವ ಸಂಬಂಧ ಸಹಕಾರ ಸಂಘಗಳ ಅಧಿನಿಯಮ / ನಿಯಮಗಳು / ಬೈಲಾಗಳಿಗೆ ಅನುಗುಣವಾಗಿ ಸರಿಯಾದ ಮತದಾರರ ಪಟ್ಟಿಯನ್ನು ತಯಾರಿಸಲು ಮತ್ತು ಚುನಾವಣೆಯನ್ನು ನಿಯಮಾನುಸಾರ, ಪಾರದರ್ಶಕವಾಗಿ ನಡೆಸು ಬಗ್ಗೆ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗಳು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಚುನಾವಣಾಧಿಕಾರಿಗಳು / ರಿರ್ಟನಿಂಗ್ ಆಫೀಸರ್‌ಗಳಿಗೆ ನಿಯಮಾನುಸಾರ ಅಗತ್ಯ ದಾಖಲೆಗಳನ್ನು ಒದಗಿಸಲು ಜವಾಬ್ದಾರರಾಗಿರುತ್ತಾರೆ.

(ಎನ್.ಸಿ.ಮುನಿಯಪ್ಪ)
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು

## ಅನುಬಂಧ-2 (ಚೆಕ್‌ಲಿಸ್ಟ್)

**ದಿನಾಂಕ : 31-03-2015ರ ಅಂತ್ಯಕ್ಕೆ ಪದಾವಧಿಯು ಮುಗಿಯಲಿರುವ ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗೆ ಸಾಮಾನ್ಯ ಚುನಾವಣೆ ನಡೆಸುವಿಕೆ – ಹಂತ ಹಂತವಾಗಿ ನಿಯಮಾನುಸಾರ ಜಿಲ್ಲಾ ಚುನಾವಣಾಧಿಕಾರಿಯು ಕ್ರಮವಿಡುವ ಬಗ್ಗೆ ಚೆಕ್‌ಲಿಸ್ಟ್.**

**ಸಂಖ್ಯೆ: ಸಚುಪ್ರಾ/ಆಡಳಿತ/ಚುನಾವಣೆ/ 96 /2014** **ದಿನಾಂಕ: 05.03.2015**

| ಕ್ರಮ ಸಂಖ್ಯೆ | ವಿವರ | ಷರಾ |
|---|---|---|
| 01 | ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗಳನ್ನು ನಡೆಸುವ ಸಂಬಂಧ ಚುನಾವಣಾ ದಿನಾಂಕಗಳನ್ನು ನಿಗಧಿಪಡಿಸುವುದು. (ದಿನಾಂಕ : 05.03.2015ರ ಪ್ರಾಧಿಕಾರದ ಅಧಿಸೂಚನೆಯಂತೆ) | ಎ. ಮಾಧ್ಯಮಿಕ **09.05.2015 ಮತ್ತು 10.05.2015**<br>ಬಿ. **ಫೆಡರಲ್**<br>ಎ-ಗುಂಪು **12.05.2015 ಮತ್ತು 13.05.2015**<br>ಬಿ-ಗುಂಪು **30.05.2015 ಮತ್ತು 31.05.2015**<br>ಸಿ. **ಅಪೆಕ್ಸ್**<br>ಎ-ಗುಂಪು **02.06.2015 ಮತ್ತು 03.06.2015**<br>ಬಿ-ಗುಂಪು **20.06.2015 ಮತ್ತು 21.06.2015**<br>ಸಿ-ಗುಂಪು **07.11.2015 ಅಥವಾ 08.11.2015**<br>ಈ ಮೇಲ್ಕಂಡ ಅವಧಿಯಲ್ಲಿ ಆಯಾಯ ಹಂತದ ಜಿಲ್ಲಾ ಚುನಾವಣಾಧಿಕಾರಿಗಳು ಸೂಕ್ತವೆನಿಸುವ ಯಾವುದೇ ದಿನಾಂಕದಲ್ಲಿ ಚುನಾವಣೆಯನ್ನು ನಿಗಧಿಪಡಿಸತಕ್ಕದ್ದು. |
| 02 | ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ, ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟ್‌ಗಳ ಕರಡು ಪಟ್ಟಿಯನ್ನು ದಾಖಲಾತಿಗಳ ಸಹಿತ ಸಂಬಂಧಿಸಿದ ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘದ / ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಆಯಾಯ ಹಂತದ ಜಿಲ್ಲಾಚುನಾವಣಾಧಿಕಾರಿಗಳಿಗೆ ಚುನಾವಣಾ ದಿನಾಂಕದ ಪೂರ್ವದ ಕನಿಷ್ಠ 60 ದಿನಗಳ ಮುಂಚಿತವಾಗಿ ಸಲ್ಲಿಸುವಿಕೆ ಬಗ್ಗೆ.<br>[ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 13ಡಿ(4) ಮತ್ತು (5) ಹಾಗೂ ಸೌಹಾರ್ದ ಸಹಕಾರಿ ನಿಯಮ 5ಬಿ(1) ಮತ್ತು (2)ರಂತೆ] | ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಠ 60 ದಿನಗಳ ಮುಂಚೆ ಆಯಾಯ ಹಂತದ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸಂಘದ / ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ನಿಯಮಾನುಸಾರ ಸಲ್ಲಿಸಬೇಕಾಗಿರುತ್ತದೆ. |
| 03 | ಮೇಲೆ ನಮೂದಿಸಲಾದ ಕಂಡಿಕೆ(2)ರಲ್ಲಿ ವಿವರಿಸಿ ರುವಂತೆ ಕರಡು ಮತದಾರರ ಮತ್ತು ಡೆಲಿಗೇಟ್‌ಗಳ ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗಧಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡು ಪಟ್ಟಿಗಳನ್ನು ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಮತ್ತು ಡೆಲಿಗೇಟ್‌ಗಳ ಪಟ್ಟಿಯ ಸಂಬಂಧ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಠ 45 ದಿನಗಳ ಮುಂಚಿತವಾಗಿ ಜಿಲ್ಲಾ ಚುನಾವಣಾಧಿಕಾರಿಯು (ಡಿ.ಇ.ಓ) ಪ್ರಕಟಿಸಬೇಕಾಗಿರುತ್ತದೆ.<br>[ಕರ್ನಾಟಕ ಸಹಕಾರ ಸಂಘಗಳ ನಿಯಮ-13ಡಿ(3)(ಎ) ಮತ್ತು ಸೌಹಾರ್ದ ನಿಯಮ-5(ಬಿ)(5)(ಬಿ)ಗಳನ್ವಯ] | ಚುನಾವಣೆ ದಿನಾಂಕಕ್ಕೆ ಪೂರ್ವದ ಕನಿಷ್ಠ 45 ದಿನಗಳ ಮುಂಚೆ ಪ್ರಕಟಿಸತಕ್ಕದ್ದು. |

| | | |
|---|---|---|
| 4 | ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸುವುದು.<br>[ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ-13ಡಿ(3)(ಬಿ) ಮತ್ತು ಸೌಹಾರ್ದ ಸಹಕಾರಿ ನಿಯಮ-5ಬಿ(6)] ಅಂತಿಮ ಮತದಾರರ ಪಟ್ಟಿಯು ಮಾಧ್ಯಮಿಕ ಸಹಕಾರ ಸಂಘದ / ಸಹಕಾರಿಗಳ ಸಂಬಂಧದಲ್ಲಿ ಮತದಾನದ ಹಕ್ಕುಳ್ಳ ಎಲ್ಲಾ ಬಿಡಿ ಸದಸ್ಯರು ಮತ್ತು ಸದಸ್ಯ ಸಂಘಗಳ ಡೆಲಿಗೇಟ್‌ಗಳ ವಿವರಗಳನ್ನು ಒಳಗೊಂಡಿರತಕ್ಕದ್ದು. | ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸತಕ್ಕದ್ದು. |
| 5 | ಸಹಕಾರ ಚುನಾವಣಾ ಪ್ರಾಧಿಕಾರವು ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆ ನಡೆಸಲು ನಿಗಧಿಪಡಿಸಿರುವ ಅಧಿಸೂಚನೆಯಂತೆ ನಿಯಮ-14ರನ್ವಯ ಜಿಲ್ಲಾ ಚುನಾವಣಾಧಿಕಾರಿಯು ನಮೂನೆ-XI ರಲ್ಲಿ ಅಧಿಸೂಚನೆ ಹೊರಡಿಸುವ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು. | ಜಿಲ್ಲಾ ಚುನಾವಣಾಧಿಕಾರಿಯು ಕರ್ನಾಟಕ ಸಹಕಾರ ಸಂಘಗಳ ನಿಯಮ-14ರನ್ವಯ ಸಾಮಾನ್ಯ ಚುನಾವಣಾ ಅಧಿಸೂಚನೆಯನ್ನು ಹೊರಡಿಸತಕ್ಕದ್ದು. |
| 6 | ಕಂಡಿಕೆ-5 ರಲ್ಲಿ ವಿವರಿಸಿದಂತೆ ಜಿಲ್ಲಾ ಚುನಾವಣಾಧಿಕಾರಿಯು ಅಧಿಸೂಚನೆ ಹೊರಡಿಸಿದ ನಂತರ ಉದ್ದೇಶಿತ ಚುನಾವಣೆಗಾಗಿ ರಿಟರ್ನಿಂಗ್ ಅಧಿಕಾರಿಯು ನಮೂನೆ-XIIರಲ್ಲಿ ಸಾರ್ವಜನಿಕ ನೋಟೀಸ್ ನೀಡತಕ್ಕದ್ದು. | ನಿಯಮ-14(3)ರಂತೆ ರಿಟರ್ನಿಂಗ್ ಅಧಿಕಾರಿಯು ಅಗತ್ಯ ಕ್ರಮವಿಡುವ ಬಗ್ಗೆ ನಿರ್ದೇಶಿಸುವುದು. |
| 7 | ಆಕಸ್ಮಿಕ ತೆರವಾದ ನಿರ್ದೇಶಕರ / ಪದಾಧಿಕಾರಿಗಳ ಚುನಾವಣೆ. | ಇಂತಹ ಪ್ರಕರಣಗಳಿದ್ದಲ್ಲಿ ಪರಿಶೀಲಿಸಿ ರಿಟರ್ನಿಂಗ್ ಆಫೀಸರ್ ನೇಮಕಾತಿಗೆ ಅಗತ್ಯ ಕ್ರಮ ಕೈಗೊಂಡು ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು. |
| 8 | ಮತದಾನ ಕೇಂದ್ರಗಳನ್ನು ಗುರುತಿಸುವಿಕೆ ಮತ್ತು ಅದರ ವಿವರಗಳು. | ರಿಟರ್ನಿಂಗ್ ಅಧಿಕಾರಿಯು ಜಿಲ್ಲಾಚುನಾವಣಾಧಿಕಾರಿಗಳೊಂದಿಗೆ ಸಮಾಲೋಚಿಸಿ ಸೂಕ್ತವಾದ ಮತದಾನ ಕೇಂದ್ರಗಳನ್ನು ಸ್ಥಾಪಿಸಲು ವ್ಯವಸ್ಥೆ ಮಾಡುವುದು. |
| 9 | ಮತದಾನ ಮತಗಟ್ಟೆ ಅಧಿಕಾರಿ / ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದಂತೆ. | ಕರ್ನಾಟಕ ಸಹಕಾರ ಸಂಘಗಳ ನಿಯಮ-13(ಎಫ್)ನ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಯು ಪ್ರತಿಯೊಂದು ಮತದಾನ ಕೇಂದ್ರಕ್ಕಾಗಿ ಒಬ್ಬ ಅಧ್ಯಕ್ಷಾಧಿಕಾರಿ (ಪ್ರಿಸೈಡಿಂಗ್) ಯನ್ನು ಮತ್ತು ತಾನು ಅವಶ್ಯವೆಂದು ಭಾವಿಸುವಂತಹ ಮತದಾನ ಸಿಬ್ಬಂದಿ (ಪೋಲಿಂಗ್ ಸ್ಟಾಫ್) ಗಳನ್ನು ನೇಮಕ ಮಾಡಬಹುದು. |
| 10 | ಚುನಾವಣೆ ನಡೆಸುವ ಸಂಬಂಧ ಅಧಿಕಾರಿ / ಸಿಬ್ಬಂದಿಗಳಿಗೆ ತರಬೇತಿ ವ್ಯವಸ್ಥೆ ಮಾಡುವುದು. | ಆಯೋಗವು ಈಗಾಗಲೇ ಚುನಾವಣಾ ಕೈಪಿಡಿಯನ್ನು ಒದಗಿಸಿದೆ. ಅಧಿನಿಯಮ / ನಿಯಮಗಳು / ಬೈಲಾ ಅವಕಾಶಗಳ ಸಂಬಂಧ ಅಧಿಕಾರಿ / ಸಿಬ್ಬಂದಿಗೆ ಸೂಕ್ತ ತಿಳುವಳಿಕೆ ನೀಡಲು ತರಬೇತಿಗೆ ಅಗತ್ಯ ವ್ಯವಸ್ಥೆ ಮಾಡುವುದು. |
| 11 | ಚುನಾವಣಾ ಫಲಿತಾಂಶ ಘೋಷಣೆ ಮತ್ತು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ಮಾಹಿತಿ / ದಾಖಲೆಗಳನ್ನು ಸಲ್ಲಿಸುವುದು. | ನಿಯಮ-14ವೈ(2)ರನ್ವಯ ರಿಟರ್ನಿಂಗ್ ಅಧಿಕಾರಿಯು ಕ್ರಮವಿಡುವಂತೆ ಸೂಚಿಸತಕ್ಕದ್ದು. |
| 12 | ಮತಪೆಟ್ಟಿಗೆಗಳ ಮತ್ತು ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ಅಭಿರಕ್ಷೆ, ಪರಿವೀಕ್ಷಣೆ ಮತ್ತು ಹಾಜರುಪಡಿಸುವಿಕೆ ಹಾಗೂ ವಿಲೇವಾರಿಯ ಬಗ್ಗೆ ಕ್ರಮವಿಡುವುದು. | ನಿಯಮ-14ಎಬಿ ಮತ್ತು ನಿಯಮ-14ಎಸಿ ಹಾಗೂ ನಿಯಮ-14ಎಡಿ ಗಳ ಅವಕಾಶದಂತೆ ಹಾಗೂ ಸಹಕಾರ ಚುನಾವಣಾ ಪ್ರಾಧಿಕಾರವು ನಿರ್ದೇಶಿಸಿರುವಂತೆ ಕ್ರಮವಿಡುವ ಬಗ್ಗೆ ನೋಡಿಕೊಳ್ಳುವುದು. |

| | | |
|---|---|---|
| 13 | ಪದಾಧಿಕಾರಿಗಳ ಚುನಾವಣೆ ಬಗ್ಗೆ. | ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ-14ಎಜಿ ಯ ಅವಕಾಶದಂತೆ ಕ್ರಮವಿಡುವುದು. |
| 14 | ಮಾದರಿ ನೀತಿ ಸಂಹಿತೆ. | ಸಹಕಾರ ಚುನಾವಣಾ ಪ್ರಾಧಿಕಾರದಿಂದ ಈಗಾಗಲೇ ಹೊರಡಿಸಿರುವ ಪತ್ರ ಸಂಖ್ಯೆ : ಸಚುಅ/17/ನೀತಿಸಂಹಿತೆ/2013-14 ದಿನಾಂಕ : 03-08-2013ರ ನೀತಿ ಸಂಹಿತೆ ಪಾಲನೆಯ ಬಗ್ಗೆ ಅಗತ್ಯ ಕ್ರಮವಿಡತಕ್ಕದ್ದಾಗಿದೆ. |

(ಎನ್.ಸಿ.ಮುನಿಯಪ್ಪ)
ಆಯುಕ್ತರು ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.